# ರೈತರಿಗೆ ಮಾದರಿಯಾದ ಸಭಾಪತಿ ಹೊರಟ್ಟಿ

**ಗದಗ** : ಸತತ ಎಂಟು ಬಾರಿ ವಿಧಾನ ಪರಿಷತ್ತಿಗೆ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ, ಮೂರು ಬಾರಿ ವಿಧಾನ ಪರಿಷತ್ತಿನ ಸಭಾಪತಿಯಾಗಿರುವ ಬಸವರಾಜ ಹೊರಟ್ಟಿಯವರಿಗೆ ಅತ್ಯಂತ ಪ್ರಿಯವಾದ ಕೆಲಸವೆಂದರೆ ಕೃಷಿ. ಹುಬ್ಬಳ್ಳಿಯ ಹತ್ತಿರದ ಛಬ್ಬಿ ಬಳಿ ತಮ್ಮದೇ ಆದ ಫಾರ್ಮ್ ಹೌಸ್ ಹೊಂದಿರುವ ಹೊರಟ್ಟಿಯವರು ತಮಗೆ ಬಿಡುವು ಸಿಕ್ಕಾಗಲೆಲ್ಲ ಧಾವಿಸುವುದು ತಮ್ಮ ಈ ತೋಟದ ಮನೆಗೆ.

ತೋಟದ ಮನೆಯಲ್ಲಿರುವ ದನಕರುಗಳೊಂದಿಗೆ, ಪ್ರೀತಿಯ ನಾಯಿಗಳೊಂದಿಗೆ, ಆಳು ಮಕ್ಕಳೊಂದಿಗೆ ಸಮಯ ಕಳೆಯುವದೆಂದರೆ ಅವರಿಗೆ ಏನೋ ಒಂದು ಆನಂದ. ದನಕರುಗಳ ಮೈ ದಡವಿ, ನಾಯಿಗಳಿಗೆಲ್ಲ ತಿನ್ನಲು

ಏನಾದರೂ ನೀಡಿ, ಆಳು ಮಕ್ಕಳ ಯೋಗಕ್ಷೇಮ ವಿಚಾರಿಸಿ ಬಂದರೆ ಅವರಿಗೆ ಮನೆಯಲ್ಲಿ ಊಟ ರುಚಿ ಹತ್ತುತ್ತದೆ.

ಇಂದಿನ ದಿನಗಳಲ್ಲಿ ಬಹುತೇಕ ರೈತರು ಾಂತ್ರಿಕ ಕೃಷಿಯೆಡೆಗೆ ಮನಸ್ಸು ಮಾಡಿದ್ದಾರೆ. ಆಗ ಮನೆಯಲ್ಲಿನ

ದನಕರುಗಳ ಆಧಾರದ ಮೇಲೆ ಅವರೆಷ್ಟು ಧನಿಕರು, ಎಂತಹ ಕೃಷಿಕರು ಎಂಬುದನ್ನು ಅಳೆಯಲಾಗುತ್ತಿತ್ತು. ಆದರೆ ಇಂದಿನ ದಿನಮಾನಗಳ್ಲ ಸಾಲ ಮಾಡಿಯಾದರೂ ಒಂದು ಟ್ರಾಕ್ಟರ್



ತರುವುದೇ ಸೈ ಎಂದು ಹೇಳುವ ಕಾಲ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಹೊರಟ್ಟಿಯವರು ಎರಡನ್ನೂ ಸಮದೂಗಿಸಿಕೊಂಡು ತಮ್ಮ ತೋಟದಲ್ಲಿ ಕೃಷಿ ಕಾಯಕ ಮಾಡುತ್ತಿರುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ.

ಇಂದಿನ ರೈತಾಪಿ ವರ್ಗದವರು ದನಕರುಗಳನ್ನು ಕಟ್ಟಿದರೆ ಅವುಗಳನ್ನು ಜೋಪಾನ ಮಾಡಬೇಕು. ಸೆಗಣಿ ಎತ್ತ ಬೇಕು. ಮಲಮೂತ್ರಗಳನ್ನೆಲ್ಲ ಬಳಿಯಬೇಕು. ಟ್ರಾಕ್ಟರ್ ತಂದರೆ ಇದಾವುದೂ ರಗಳೆ ಇಲ್ಲವೆಂದು ರೈತರು ಅದಕ್ಕೆ ಮೊರೆ ಹೋಗಿದ್ದಾರೆ. ಶುಕ್ರವಾರ ದಿನ ತಮ್ಮ ಸಮಯವನ್ನು ಬಿಡುವು ಮಾಡಿಕೊಂಡು ತೋಟಕ್ಕೆ ಬಂದ ಹೊರಟ್ಟಿಯವರು ಮೊದಲು ಟ್ರಾಕ್ಟರ್ ಮೂಲಕ ಹೊಲವನ್ನು ಹರಗುವ ಕೆಲಸ ಮಾಡಿದರು. ನಂತರ ಅಲ್ಲಿದ್ದ

ಎತ್ತುಗಳ ಮೈ ತೊಳೆಯುವ ಕಾರ್ಯ ಮಾಡಿದಾಗ ಆಳುಗಳೇ ಬೆಕ್ಕಸ ಬೆರಗಾಗಿ ನೋಡುತ್ತ ನಿಂತರು. ರಾಜಕಾರಣದಲ್ಲಿ ಇಷ್ಟೊಂದು ಎತ್ತರದ ಸ್ಥಾನವನ್ನು ಅಲಂಕರಿಸಿರುವ ವ್ಯಕ್ತಿ, ಇಲ್ಲಿ ತೋಟದಲ್ಲಿ ಅದೆಷ್ಟು ಸಾಮಾನ್ಯರಾಗಿ ರೈತ ಕಾರ್ಮಿಕನಂತೆ ದುಡಿಯುವದನ್ನು ಕಂಡಾಗ ಬಸವಣ್ಣನವರ ಕಾಯಕ ಯೋಗ, ತತ್ವ ನೆನಪಾಗುತ್ತದೆ. ಹೀಗೆ ಹೊಲದಲ್ಲಿನ ಎಲ್ಲ ಕಾರ್ಯಗಳನ್ನು ಯಾವಾಗಲೂ ಮನಸಾರೆ ಮಾಡುವ ಮೂಲಕ ಹೊರಟ್ಟಿಯವರು ಈ ಸಾರೆ ಬಸವ ಜಯಂತಿಗೆಂದು ಕಾಯಕ ವೃತ್ತಿ ಕೈಗೊಂಡು ರೈತರಿಗೆ ಮಾದರಿಯಾದರು.

# ಬಸವ ಜಯಂತಿ: ಸಭಾಪತಿ ಹೊರಟ್ಟಿ ರೈತರಿಗೆ ಮಾದರಿ



**ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತೋಟದಲ್ಲಿ ಎತ್ತಿನ ಮೈ ತೊಳೆಯುತ್ತಿರುವದು.**

**ಗದಗ:** ಸತತ ಎಂಟು ಬಾರಿ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ, ಮೂರು ಬಾರಿ ವಿಧಾನ ಪರಿಷತ್ ಸಭಾಪತಿಯಾಗಿರುವ ಬಸವರಾಜ ಹೊರಟ್ಟಿ ಅವರಿಗೆ ಅತ್ಯಂತ ಪ್ರಿಯವಾದ ಕೆಲಸ ಕೃಷಿ. ಹುಬ್ಬಳ್ಳಿಯ ಹತ್ತಿರದ ಛಬ್ಬಿ ಬಳಿ ತಮ್ಮದೆಯಾದ ಫಾರ್ಮ್ ಹೌಸ್‌ವೊಂದನ್ನು ಹೊಂದಿರುವ ಬಸವರಾಜ ಹೊರಟ್ಟಿ ತಮ್ಮ ಬಿಡುವಿನ ವೇಳೆಯಲ್ಲಿ ಧಾವಿಸುವುದು ತಮ್ಮ ತೋಟದ ಮನೆಗೆ.

ತೋಟದಮನೆಯಲ್ಲಿರುವ ದನಕರುಗಳು, ಪ್ರೀತಿಯನಾಯಿಗಳೊಂದಿಗೆ, ಆಳು ಮಕ್ಕಳೊಂದಿಗೆ ಸಮಯ ಕಳೆಯುವದೆಂದರೆ ಅವರಿಗೆ ಏನೋ ಒಂದು ಆನಂದ. ದನಕರುಗಳ ಮೈ ದಡವಿ, ನಾಯಿಗಳಿಗೆಲ್ಲ ತಿನ್ನಲು ಏನಾದರೂ ನೀಡಿ, ಆಳು ಮಕ್ಕಳ ಯೋಗಕ್ಷೇಮ ವಿಚಾರಿಸಿ ಬಂದರೆ ಅವರಿಗೆ ಮನೆಯಲ್ಲಿ ಊಟ ರುಚಿ ಹತ್ತುತ್ತದೆಯಂತೆ. ಇಂದಿನ ದಿನಗಳಲ್ಲಿ ಸಾಲ ಮಾಡಿಯಾದರೂ ಟ್ರ್ಯಾಕ್ಟರ್ ತಂದರೆ ಸೈ ಎಂದು ಹೇಳುವ ಕಾಲ. ಇಂತಹ ಪರಿಸ್ಥಿತಿಯಲ್ಲಿಯೂ ಹೊರಟ್ಟಿಯವರು ಎರಡನ್ನೂ ಸಮದೂಗಿಸಿಕೊಂಡು ತಮ್ಮ ತೋಟದಲ್ಲಿ ಮಾಡುವ ಕೃಷಿ ಕಾಯಕ ನೋಡುವುದೇ ಕಣ್ಣಿಗೊಂದು ಹಬ್ಬ. ಇಂದಿನ ರೈತರು ದನಕರು ಜೋಪಾನ ಜೊತೆಗೆ ಶೆಗಣಿ ಮಲ,ಮೂತ್ರ ಬಳಿಯಬೇಕು. ಟ್ರ್ಯಾಕ್ಟರ್ ತಂದರೆ ಇದಾವುದೂ ರಗಳೆ ಇಲ್ಲವೆಂದು ರೈತರು ಟ್ರ್ಯಾಕ್ಟರ್ ಮೊರೆ ಹೋಗಿದ್ದಾರೆ. ಶುಕ್ರವಾರ ತಮ್ಮ ಸಮಯ ಬಿಡುವು ಮಾಡಿಕೊಂಡು ತೋಟಕ್ಕೆ ಬಂದ ಹೊರಟ್ಟಿಯವರು ಟ್ರ್ಯಾಕ್ಟರ್ ಮೂಲಕ ಹೊಲ ಹರಗಿದರು. ನಂತರ ಅಲ್ಲಿದ್ದ ಎತ್ತುಗಳ ಮೈ ತೊಳೆಯುವಾಗ ಆಳುಗಳೆ ಬೆಕ್ಕಸ ಬೆರಗಾಗಿ ನಿಂತರು. ರಾಜಕಾರಣದಲ್ಲಿ ಇಷ್ಟೊಂದು ಎತ್ತರದ ಸ್ಥಾನ ಅಲಂಕರಿಸಿರುವ ವ್ಯಕ್ತಿ, ತಮ್ಮ ತೋಟದಲ್ಲಿ ಸಾಮಾನ್ಯರಾಗಿ ರೈತ, ಕಾರ್ಮಿಕನಂತೆ ದುಡಿಯುವದನ್ನು ಕಂಡಾಗ ಬಸವಣ್ಣನವರ ಕಾಯಕ, ತತ್ವ ನೆನಪಾಗುತ್ತದೆ. ಹೊಲದಲ್ಲಿನ ಎಲ್ಲ ಕಾರ್ಯ ಯಾವಾಗಲೂ ಮನಸಾರೆ ಮಾಡುವ ಹೊರಟ್ಟಿಯವರು ಈ ಸಾರೆ ಬಸವ ಜಯಂತಿಗೆಂದು ಕಾಯಕ ವೃತ್ತಿ ಕೈಗೊಂಡು ರೈತರಿಗೆ ಮಾದರಿ.




# ರೈತರಿಗೆ ಮಾದರಿಯಾದ ಸಭಾಪತಿ ಬಸವರಾಜ ಹೊರಟ್ಟಿ



ಸತತ ಎಂಟು ಬಾರಿ ವಿಧಾನ ಪರಿಷತ್ತಿಗೆ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ, ಮೂರು ಬಾರಿ ವಿಧಾನ ಪರಿಷತ್ತಿನ ಸಭಾಪತಿಯಾಗಿರುವ ಬಸವರಾಜ ಹೊರಟ್ಟಿಯವರಿಗೆ ಅತ್ಯಂತ ಪ್ರಿಯವಾದ ಕೆಲಸವೆಂದರೆ ಕೃಷಿ. ಹುಬ್ಬಳ್ಳಿಯ ಹತ್ತಿರದ ಛಬ್ಬಿ ಬಳಿ ತಮ್ಮದೇ ಆದ ಫಾರ್ಮ್ ಹೌಸ್ ಒಂದನ್ನು ಹೊಂದಿರುವ ಹೊರಟ್ಟಿಯವರು ತಮಗೆ ಬಿಡುವು ಸಿಕ್ಕಾಗಲೆಲ್ಲ ಧಾವಿಸುವುದು ತಮ್ಮ ಈ ತೋಟದ ಮನೆಗೆ. ತೋಟದ ಮನೆಯಲ್ಲಿರುವ ದನಕರುಗಳೊಂದಿಗೆ, ಪ್ರೀತಿಯ ನಾಯಿಗಳೊಂದಿಗೆ, ಆಳು ಮಕ್ಕಳೊಂದಿಗೆ ಸಮಯ ಕಳೆಯುವದೆಂದರೆ ಅವರಿಗೆ ಏನೋ ಒಂದು ಆನಂದ. ದನಕರುಗಳ ಮೈ ದಡವಿ, ನಾಯಿಗಳಿಗೆಲ್ಲ ತಿನ್ನಲು ಏನಾದರೂ ನೀಡಿ, ಆಳು ಮಕ್ಕಳ ಯೋಗಕ್ಷೇಮ ವಿಚಾರಿಸಿ ಬಂದರೆ ಅವರಿಗೆ ಮನೆಯಲ್ಲಿ ಊಟ ರುಚಿ ಹತ್ತುತ್ತದೆ.

ಇಂದಿನ ದಿನಗಳಲ್ಲಿ ಬಹುತೇಕ ರೈತರು ಯಾಂತ್ರಿಕ ಕೃಷಿಯೆಡೆಗೆ ಮನಸ್ಸು ಮಾಡಿದ್ದಾರೆ. ಆಗ ಮನೆಯಲ್ಲಿನ ದನಕರುಗಳ ಆಧಾರದ ಮೇಲೆ ಅವರೆಷ್ಟು ಧನಿಕರು, ಎಂತಹ ಕೃಷಿಕರು ಎಂಬುದನ್ನು ಅಳೆಯಲಾಗುತ್ತಿತ್ತು. ಆದರೆ ಇಂದಿನ ದಿನಮಾನಗಳಲ್ಲಿ ಸಾಲ ಮಾಡಿಯಾದರೂ ಒಂದು ಟ್ರ್ಯಾಕ್ಟರ್ ತರುವುದೇ ಸೈ ಎಂದು ಹೇಳುವ ಕಾಲ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಹೊರಟ್ಟಿಯವರು ಎರಡನ್ನೂ ಸಮದೂಗಿಸಿಕೊಂಡು ತಮ್ಮ ತೋಟದಲ್ಲಿ ಕೃಷಿ ಕಾಯಕ ಮಾಡುತ್ತಿರುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ.

ಇಂದಿನ ರೈತಾಪಿ ವರ್ಗದವರು ದನಕರುಗಳನ್ನು ಕಟ್ಟಿದರೆ ಅವುಗಳನ್ನು ಜೋಪಾನ ಮಾಡಬೇಕು, ಸೆಗಣಿ ಎತ್ತಬೇಕು, ಮಲಮೂತ್ರಗಳನ್ನೆಲ್ಲ ಬಳಿಯಬೇಕು. ಟ್ರ್ಯಾಕ್ಟರ್ ತಂದರೆ ಇದಾವುದೂ ರಗಳೆ ಇಲ್ಲವೆಂದು ರೈತರು ಅದಕ್ಕೆ ಮೊರೆ ಹೋಗಿದ್ದಾರೆ. ಶುಕ್ರವಾರ ದಿನ ತಮ್ಮ ಸಮಯವನ್ನು ಬಿಡುವು ಮಾಡಿಕೊಂಡು ತೋಟಕ್ಕೆ ಬಂದ ಹೊರಟ್ಟಿಯವರು ಮೊದಲು ಟ್ರ್ಯಾಕ್ಟರ್ ಮೂಲಕ ಹೊಲವನ್ನು ಹರಗುವ ಕೆಲಸ ಮಾಡಿದರು. ನಂತರ ಅಲ್ಲಿದ್ದ ಎತ್ತುಗಳ ಮೈ ತೊಳೆಯುವ ಕಾರ್ಯ ಮಾಡಿದಾಗ ಆಳುಗಳೆ ಬೆಕ್ಕಸ ಬೆರಗಾಗಿ ನೋಡುತ್ತ ನಿಂತರು. ರಾಜಕಾರಣದಲ್ಲಿ ಇಷ್ಟೊಂದು ಎತ್ತರದ ಸ್ಥಾನವನ್ನು ಅಲಂಕರಿಸಿರುವ ವ್ಯಕ್ತಿ, ಇಲ್ಲಿ ತೋಟದಲ್ಲಿ ಅದೆಷ್ಟು ಸಾಮಾನ್ಯರಾಗಿ ರೈತ ಕಾರ್ಮಿಕನಂತೆ ದುಡಿಯುವದನ್ನು ಕಂಡಾಗ ಬಸವಣ್ಣನವರ ಕಾಯಕ ಯೋಗ, ತತ್ವ ನೆನಪಾಗುತ್ತದೆ. ಹೀಗೆ ಹೊಲದಲ್ಲಿನ ಎಲ್ಲ ಕಾರ್ಯಗಳನ್ನು ಯಾವಾಗಲೂ ಮನಸಾರೆ ಮಾಡುವ ಮೂಲಕ ಹೊರಟ್ಟಿಯವರು ಈ ಸಾರೆ ಬಸವ ಜಯಂತಿಗೆಂದು ಕಾಯಕ ವ್ಯಕ್ತಿ ಕೈಗೊಂಡು ರೈತರಿಗೆ ಮಾದರಿಯಾದರು.